**ಮೂ.ದಾ.ನಂ. 36/2019**

ಪಿ.ಡಬ್ಲ್ಯು.1

(ಇಂದು ದಿನಾಂಕ: **02-06-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ 9ನೇ ಪ್ರತಿವಾದಿ ಶ್ರೀ. ಎ.ಆರ್.ಎನ್. ವಕೀಲರಿಂದಃ**

ವಾದಿಯರ ತಂದೆಯಾದ ವೆಂಕಟರಮಣ ಇವರಿಗೆ 4 ಜನ ಗಂಡು ಮಕ್ಕಳು ಹಾಗೂ 1 ಹೆಣ್ಣು ಮಗು ಇರುತ್ತದೆ. ಅವರ ಹೆಸರು ಗಜಾನನ, ಶಿವಾ, ಚಂದ್ರಹಾಸ, ಜಯಲಕ್ಷ್ಮಿ ಹಾಗೂ ರಮೇಶ ಎಂದರೆ ಸರಿ. ಅವರೆಲ್ಲರೂ ಜೀವಂತ ಇರುತ್ತಾರೆ. ದಾವಾ ಅಸ್ತಿಯಲ್ಲಿ ವಾದಿಗೆ ಇರುವಂತೆ ಸಮಾನ ಹಕ್ಕು ಅವರ ಉಳಿದ ಸಹೋದರರಿಗೂ ಕೂಡ ಇದೆ ಎಂದರೆ ಸರಿ. ಸದ್ರಿ ಉಳಿದ ಸಹೋದರ ಹಾಗೂ ಸಹೋದರಿಯನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಲಿಲ್ಲ ಎಂದರೆ ಸಾಕ್ಷಿಯು ಅವರೆಲ್ಲರೂ ನನ್ನ ಎದುರಿಗೆ ವಾದಿಗೆ ದಾವೆಯನ್ನು ಅಕುಮೆ ನಾತೆಯಿಂದ ದಾಖಲು ಮಾಡಲು ತಮ್ಮ ಅಭ್ಯಂತರ ಇಲ್ಲ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಅಧಿಕಾರ ಪತ್ರದಲ್ಲಾಗಲೀ ಅಥವಾ ಇತರ ಅಧಿಕಾರ ಪತ್ರದಲ್ಲಾಗಲೀ ವಾದಿಯ ಉಳಿದ ಸಹೋದರ ಹಾಗೂ ಸಹೋದರಿಯರು ಅಕುಮೆ ನಾತೆಯಿಂದ ದಾವೆಯನ್ನು ನಡೆಸಲು ತಮ್ಮ ಅಭ್ಯಂತರ ಇಲ್ಲ ಎಂಬ ವಿಷಯವನ್ನು ನಮೂದು ಮಾಡಿರುವುದಿಲ್ಲ. ವಾದಿಯ ಉಳಿದ ಸಹೋದರರು ಹಾಗೂ ಸಹೋದರಿ ದಾವಾ ಆಸ್ತಿಯಲ್ಲಿ ನನಗಿಂತ ಹೆಚ್ಚಿನ ಮಾಹಿತಿಯನ್ನು ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಅವರು ವಿದೇಶದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಚಂದ್ರಹಾಸ ಇವರು ಅಮೇರಿಕಾದಲ್ಲಿ ವಾಸ್ತವ್ಯ ಇದ್ದು, ಗಜಾನನ

ದಾಂಡೇಲಿಯಲ್ಲಿ ಇದ್ದು, ಶಿವಾ ಇವರು ಗೋವಾ ದಲ್ಲಿ ವಾಸ್ತವ್ಯದಲ್ಲಿ ಇರುತ್ತಾರೆ. ಜಯಲಕ್ಷ್ಮಿ ಇವರ ವಾಸ್ತವ್ಯ ನನಗೆ ಗೊತ್ತಿಲ್ಲ.

ನಿಪಿ1 ನ್ನು ಉಪ ನೋಂದಣಾಧಿಕಾರಿಯವರ ಕಛೇರಿ ಕುಮಟಾದಲ್ಲಿ ನೋಂದಾಯಿಸಿಕೊಂಡಿರುವುದಿಲ್ಲ. ಜಿಪಿಎ ಮಾಡುವ ಸಂದರ್ಭದಲ್ಲಿ ವಾದಿಯ ಎಲ್ಲಾ ಸಹೋದರ ಸಹೋದರಿಯರು ಉಪಸ್ಥಿತ ಇದ್ದರಾ ಎಂದರೆ ಸಾಕ್ಷಿಯು ಈ ದಾವೆಯ ಕುರಿತು ಮಾತನಾಡುವ ಸಂದರ್ಭದಲ್ಲಿ ಎಲಲರೂ ಉಪಸ್ಥಿತ ಇದ್ದು ನಿಪಿ1ನ್ನು ಮಾಡುವ ಸಂದರ್ಭದಲ್ಯಾರೂ ಯಾರೂ ಉಪಸ್ಥಿತರಿರಲಿಲ್ಲ. ವಾದಿಯು ವೈದ್ಯಕೀಯ ವೃತ್ತಿಯನ್ನು ಮಾಡಿಕೊಂಡು ಬರುತ್ತಿದ್ದು, ಅವರು ಆರೋಗ್ಯವಂತರಾಗಿದ್ದು, ಈಗಲೂ ವೃತ್ತಿಯನ್ನು ನಿರ್ವಹಿಸುತ್ತಾ ಬರುತ್ತಿದ್ದಾರೆ. ಅವರು ಬಾಡ ದಲ್ಲಿ ತಮ್ಮ ವೃತ್ತಿ ಜೀವನವನ್ನು ನಡೆಸುತ್ತಿದ್ದಾರೆ. ಅವರು ಅಶ್ವಿನಿ ಕ್ಲೀನಿಕ್ ಎಂಬ ಕ್ಲೀನಿಕ ಇಟ್ಟುಕೊಂಡಿರುತ್ತಾರೆ. ಬಾಡ ಎಂಬುವುದು ಕುಮಟಾದಿಂದ ಕಿ ಕಿಮೀ ದೂರ ಇದೆ. ವಾದಿಯು ವೈದ್ಯಕೀಯ ವೃತ್ತಿಯನ್ನು ಹೊರತುಪಡಿಸಿ ನ್ಯಾಯಾಲಯಕ್ಕೆ ಹಾಜರು ಆಗಲು ಸಾಧ್ಯವಿಲ್ಲದ ಕಾರಣವವನ್ನು ನಾನು ನನ್ನ ದಾವೆಯಲ್ಲಿ ಬರೆದಿರುತ್ತೇನೆ.

ವಾದಿ ಹಾಗೂ ನಾನು ದಾಯಾದಿ ಆಗಿರುತ್ತೇವೆ. ವಾದಿಯು ನನ್ನ ದೊಡ್ಡಪ್ಪನ ಮಗನಾಗಿರುತ್ತಾನೆ. ವಾದಿಯ ತಂದೆಯಾದ ವೆಂಕಟರಮಣ ಇವರಿಗೆ ಯಾವುದೇ ಸಹೋದರ ಸಹೋದರಿ ಇರುವುದಿಲ್ಲ. ವಾದಿಯ ತಂದೆ ದೊಡ್ಡಪ್ಪ ಎಂಬುವುದನ್ನು ಯಾವ ರೀತಿಯಾದ ಸಂಬಂದಿದಿಂದ ಅವರು ನನಗೆ ದೊಡ್ಡಪ್ಪ ಆಗುತ್ತಾರೆ ಎಂಬ ಬಗ್ಗೆ ನನಗೆ ಹೇಳಲು ಆಗುವುದಿಲ್ಲ.

**ಮೂ.ದಾ.ನಂ.** 36/2019

ಪಿ.ಡಬ್ಲ್ಯು 1

ನಾನು ದಾವಾ ಆಸ್ತಿಯ ಹತ್ತಿರದಲ್ಲಿ ವಾಸ್ತವ್ಯ ಇರುತ್ತೇವೆ. ದಾವೆಯನ್ನು ದಾಖಲು ಮಾಡವ ಪೂರ್ವದಲ್ಲಿ ದಾವಾ ಆಸ್ತಿಯ ಕುರಿತಾಗಿ ವಾದಿ ಜೊತೆಗೆ ಚರ್ಚೆ ಮಾಡಿದ್ದೀರಾಎ ಂದರೆ ಸಾಕ್ಷಿಯು ವಾದಿಗೆ ದಾವಾ ಆಸ್ತಿಯ ಸರ್ವೆ ಗೆ ಸಂಬಂಧಿಸಿದಂತಹ ನೊಟೀಸ ತಲುಪಿದ ನಂತರದಲ್ಲಿ ನಮಗೆ ದಾವಾ ಅಸ್ತಿಯ ಬಗ್ಗೆ ಚರ್ಚೆ ಮಾಡಿ ತಿಳಿದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದ್ರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನಂತರ ವಾದಿಯು ವಕೀಲರನ್ನು ಭೇಟ್ಟಿಯಾಗಿ ಈ ದಾವೆಯನ್ನು ಬರೆಸಿರುತ್ತಾರೆ.

ದಾವಾ ಆಸ್ತಿಯು ವೆಂಕಟರಮಣ ವೆಂಕಟರಮಣ ಭಟ್ಟ ಇವರ ಪೂರ್ವದಲ್ಲಿ ಗಂಗಮ್ಮ ಕೋಂ ವೆಂಕಟರಮಣ ಭಟ್ಟ ಇವರ ಹೆಸರಿನಲ್ಲಿ ಇತ್ತು. ಈ ದಾವೆಯಲ್ಲಿ ವಾದಿ ಹಾಗೂ ಪ್ರತಿವಾದಿ 1 ರಿಂದ 5 ರವರ ತಂದೆಯ ಹೆಸರು ವೆಂಕಟರಮಣ ಭಟ್ಟ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಇಬ್ಬರು ವ್ಯಕ್ತಿಗಳು ಬೇರೆ ಬೇರೆ ಆಗಿರುತ್ತಾರೆ ಎಂದು ನುಡಿಯುತ್ತಾರೆ.

ವಾದಿಯ ತಂದೆಯು ದಿಃ 25/10/1985 ರಲ್ಲಿ ಮೃತಾಗಿರುತ್ತಾರೆ ಎಂದರೆ ಸರಿ. ಅವರ ಮರಣ ದಾಖಲೆಯನ್ನು ನಿಪಿ29 ಎಂದು ನಿಶಾನೀಕರಿಸಿರುತ್ತೇವೆ. ಸಾಕ್ಷಿಗೆ ನಿಪಿ29 ನ್ನು ತೋರಿಸಲಾಗಿ ಸದ್ರಿ ದಾಖಲಾತಿಯಲ್ಲಿ ತಾಯಿಯ ಹೆಸರು ಖಾಲಿ ಆಗಿದೆ ಎಂದರೆ ಸರಿ. ವಾದಿಯ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರ ತಾಯಿಯ ಹಸೆರು ಗಂಗಮ್ಮ ಅಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರ ತಾಯಿಯ ಹೆಸರು ಗಂಗಮ್ಮ

ಎಂದು ಪುರಾವೆ ಮಾಡಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮೂ.ದಾ.ನಂ.** 36/2019

ಪಿ.ಡಬ್ಲ್ಯು 1

ಗಂಗಮ್ಮ ಇವರ ಮರಣಾನಂತರ ದಾವಾ ಆಸ್ತಿಯು ಅಪ್ರಾಯಸ್ಥ ವಯಸ್ಕರ ರಕ್ಷಣ ನಾತೆಯಿಂದ ಗಣಪತಿ ಗಣಪತಿ ಭಟ್ಟ ಇವರ ಹೆಸರಿನ ಜೊತೆಗೆ ವಾದಿಯ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರ ಹೆಸರು ದಾಖಲಾಗಿರುತ್ತದೆ. ಗಣಪತಿ ಗಣಪತಿ ಭಟ್ಟ ಇವರು ವಾದಿಯರ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರಿಗಿ ದೊಡ್ಡಪ್ಪ ಆಗಿರುತ್ತಾರೆ. ವಾದಿಯರ ತಂದೆಯ ತಂದೆಯಾದ ವೆಂಕಟರಮಣ ಭಟ್ಟ ಹಾಗೂ ಗಣಪತಿ ಗಣಪತಿ ಭಟ್ಟ ಇವರು ಸಹೋದರರು ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇವೆ.

ವಾದಿಯರ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರ ಮರಣಾನಂತರ ವಾದಿಯರ ಹೆಸರು ಅಕುಮೆ ನಾತೆಯಿಂದ ದಾಖಲಾಗಿರುತ್ತದೆ. ಸದ್ರಿ ದಾಖಲಾತಿಯನ್ನು ನಿಪಿ 16 ಎಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನಿಪಿ16 ದಿಃ 30/01/1986 ರಂದು ಮ್ಯುಟೇಷನ್ ಜ್ಯಾರಿಯಾಗಿರುತ್ತದೆ ಎಂದರೆ ಸರಿ. ನಿಪಿ16 ರಲ್ಲಿ ದಾವಾ ಆಸ್ತಿಗಳು ದಾಖಲಾಗಿರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನಿಪಿ16 ರಲ್ಲಿ ದಾವಾ ಆಸ್ತಿ ದಾಖಲಾಗಿರುವುದಿಲ್ಲ ಎಂಬ ಕಾರಣಕ್ಕಾಗಿ ಈ ದಾವೆಯನ್ನು ದಾಖಲು ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

1 ರಿಂದ 5ನೇ ಪ್ರತಿವಾದಿಯ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರು ದಿಃ 22/07/1989 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. 1 ರಿಂದ 5ನೇ

ಪ್ರತಿವಾದಿಯರ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರ ಮರಣಾ ನಂತರ ದಿಃ 01/02/1990 ರ ಪ್ರಕಾರ ಮ್ಯುಟೇಷನ ಪ್ರಕಾರ 8402 (ನಿಪಿ19) ರಂತೆ ಪ್ರತಿವಾದಿಯರ ಹೆಸರು ನಮೂಗಿದಾರುತ್ತದೆ ಎಂದರೆ ಸರಿ. ನಿಪಿ19 ರಲ್ಲಿ ದಾವಾ ಆಸ್ತಿಗಳ ಸರ್ವೆ ನಂಬರ ನಮೂದು ಇದೆ ಎಂದರೆ ಸರಿ ಸಾಕ್ಷಿಯು ಮುಂದುವರಿದು ಸದ್ರಿ ನಿಪಿ19 ಭೋಗಸ್ ದಾಖಲಾತಿ ಎಂದು ಈ ದಾವೆಯನ್ನು ದಾಖಲಾತಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

ವಾದಿಯ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರ ಮರಣಾನಂತರ ವಾದಿಯ ಸಹೋದರನಾದ ಗಜಾನನ ಭಟ್ಟ ಇತನು ವಾರಿಸಾ ನಾತೆಗೆ ಅರ್ಜಿಯನ್ನು ನೀಡಿರುತ್ತಾನೆ. ನಂತರ ಉಳಿದ ಸಹೋದರರು ವಾದಿಯ ಹಸೆರು ಅಕುಮೆ ನಾತೆಯಿಂದ ದಾಖಲು ಮಾಡಲು ಸಂಬಂಧಿಸಿರುತ್ತಾರೆ.

ದಿಃ 27/05/2003 ರಲ್ಲಿ ಮಹಾದೇವಿ ಹಾಗೂ ಪ್ರತಿವಾದಿ ನಂಬರ 1 ರಿಂದ 5 ರವರ ಮಧ್ಯ ವಾಂಟಣಿ ದಸ್ತಾವೇಜು ಆದ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಸದ್ರಿ ದಾಖಲಾತಿಯನ್ನು ನಾನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. (ನಿಪಿ22) ಸದ್ರಿ ದಾಖಲಾತಿಯಲ್ಲಿ ದಾವಾ ಆಸ್ತಿಯ ಕುರಿತಾಗಿ ನಮೂದು ಇದೆ ಎಂದರೆ ಸರಿ. ಸಅದ್ರಿ ಸಂದರ್ಭದಲ್ಲಿ ವಾದಿ ಹಾಗೂ ಆತನ ಸಹೋದರ ಸಹೋದರಿಯರು ನಿಪಿ 22 ಕ್ಕೆ ಯಾವುದೇ ತಕರಾರನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ನಿಪಿ 22 ರ ಕುರಿತಾಗಿ ಅವರಿಗೆ ಮಾಹಿತಿ ಇರಲಿಲ್ಲ

ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಅವರ ಕಬ್ಜಾದಲ್ಲಿ ಇಲ್ಲದೇ ಇರುವುದರಿಂದ ಅವರಿಗೆ ಈ ಕುರಿತಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗೆ ಸಂಬಂಧಿಸಿದಂತೆ 1981 ರಿಂದ ಇಲ್ಲೀಯವರೆಗೆ ಪ್ರತಿವಾದಿಯರು ಹಾಗೂ ಅವರ ತಾಯಿಯಾದ ಮಹಾದೇವಿಯವರು ಕಂದಾಯ ಇಲಾಖೆಯಲ್ಲಿ ತೀರ್ವೆ ಹಾಗೂ ತೇರಿಗೆಯನ್ನು ಕಟ್ಟುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಯು ವಾದಿಯರ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರ ಅವಿಭಕ್ತ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು 1 ರಿಂದ 5ನೇ ಪ್ರತಿವಾದಿಯರ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಯರ ತಂದೆಯ ಹೆಸರು ವೆಂಕಟರಮಣ ವೆಂಕಟರಮಣ ಭಟ್ಟ ಹಾಗೂ ತಾಯಿಯ ಹೆಸರು ಮಹಾದೇವಿ, 1 ರಿಂದ 5ನೇ ಪ್ರತಿವಾದಿಯರ ತಂದೆಯ ಹೆಸರು ವೆಂಕಟರಮಣ ವೆಂಕಟರಮಣ ಭಟ್ಟ ಹಾಗೂ ತಾಯಿಯ ಹೆಸರು ಮಹಾದೇವಿ ಆಗಿದ್ದು ಇವರಿಬ್ಬರ ಹೆಸರು ಒಂದೇ ಆಗಿರುವ ಗೈರು ಫಾಯದೇಯನ್ನು ಪಡೆದುಕೊಂಡು ಈ ದಾವೆಯನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ16 ರಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯ ತಂದೆಯ ಹೆಸರು ನಜರ ಚೂಕಿನಿಂದ ಬಿಟ್ಟು ಹೋಗಲಿಲ್ಲ ಎಂದರೆ ಸರಿಯಲ್ಲ. ಒಂದಾನುವೇಳೆ ಈ ರೀತಿಯಾದರೆ ವಾದಿ ಹಾಗೂ ಆತನ ಸಹೋದರ ಹಾಗೂ ಸಹೋದರಿಯರು ನ್ಯಾಯಾ ಲಯ ಕ್ಕೆ ದಾವೆಯನ್ನು ದಾಖಲು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಅದರ ಗೈರು ಫಾಯದೆಯನ್ನು ಪಡೆದುಕೊಂಡು ಈ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಬೀರಪ್ಪ ಜಟ್ಟಿ ಪಟಗಾರ ಇವರಿಗೆ ಸಂರಕ್ಷಿತ ನಾತೆಯಿಂದ ಬಂದಂತಹ ಆಸ್ತಿಗಳು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಈ ಕುರಿತು ನ್ಯಾಯಾಲಯದಿಂದ ಆದೇಶ ಆಗಿರುತ್ತದೆ ಎಂದು ನುಡಿಯುತ್ತಾರೆ. ಅದರ ನಂತರ ದಾವಾ ಆಸ್ತಿಯು 1 ರಿಂದ 5ನೇ ಪ್ರತಿವಾದಿಯರ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರಿಗೆ ಭೂ ನ್ಯಾಯ ಮಂಡಳಿಯಿಂದ ಆದೇಶ ಆಗಿ ಬಂದಿರುವ ಆಸ್ತಿ ಎಂದರೆ ಸರಿಯಲ್ಲ. ಅಲ್ಲಿಂದ 2015 ರವರೆಗೆ 1 ರಿಂದ 5ನೇ ಪ್ರತಿವಾದಿಯರ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರು ಹಾಗೂ 1 ರಿಂದ 5ನೇ ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇದ್ದರು ಎಂದರೆ ಸರಿಯಲ್ಲ.

ನಂತರ 1 ರಿಂದ 5ನೇ ಪ್ರತಿವಾದಿಯರು ನಿಪಿ 23 ರಂತೆ 6ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುತ್ತಾರೆ ಹಾಗೂ ಸದ್ರಿ ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ23 ರ ನಂತರ ದಾವಾ ಆಸ್ತಿಯು 6ನೇ ಪ್ರತಿವಾದಿಯ ಹೆಸರಿಗೆ ಕಂದಾಯ ದಾಖಲೆಯಲ್ಲಿ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ನಾವು ಆ ಕಾರಣಕ್ಕಾಗಿ ದಾವೆಯನ್ನು ದಾಖಲು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಕಂದಾಯ ಇಲಾಖೆಯಲ್ಲಿ 6ನೇ ಪ್ರತಿವಾದಿಯ ಹೆಸರು 2013 ನೇ ಸಾಲಿನಲ್ಲಿ ದಾಖಲು ಆಗಿರುವುದರಿಂದ ಈಗ ನಮಗೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಮೂ.ದಾ.ನಂ. 36/2019**

ಪಿ.ಡಬ್ಲ್ಯು.1

6ನೇ ಪ್ರತಿವಾದಿಯು ತದನಂತರ ದಾವಾ ಆಸ್ತಿಯನ್ನು 2022–23 ರಲ್ಲಿ 9ನೇ ಪ್ರತಿವಾದಿಗೆ ಮಾರಾಟ ಮಾರಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅದಕ್ಕಾಗಿ ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ದಿಃ 29/04/2019 ರಲ್ಲಿ ವಾದಿಯು ನಿಪಿ 31 ನ್ನು ಉಪ ನೋಂದಣಾಧಿಕಾರಿಯವರ ಕಛೇರಿಗೆ ನೀಡಿರುತ್ತಾರೆ ಎಂದರೆ ಸರಿ. ನಂತರ ಉಪ ನೋಂದಣಾಧಿಕಾರಯವರು ನಿಪಿ 31 ರ ಹಿಂದುಗಡೆ ಹಿಂಬವರಹವನ್ನು ಮಾಡಿುರತ್ತಾರೆ ಎಂದರೆ ಸರಿ. ನಂತರ ನಿಪಿ 31 ನಮಗೆ ಹಿಂದಿರುಗಿಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗೂ ವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 9ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಅಬಿ ವೃದ್ಧಿಪಡಿಸಿರುತ್ತಾರೆ ಎಂದರೇ ಸರಿಯಲ್ಲ. ಪ್ರಸ್ತುತ 9ನೇ ಪ್ರತಿವಾದಿಯು ಕಂದಾಯ ಇಲಾಖೆಯಲ್ಲಿ ತೀರ್ವೆಯನ್ನು ಕಟ್ಟುತ್ತಿದ್ದಾರೆ ಎಂದರೆ ಸಾಕ್ಷಿಯು ಈ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು 1 ರಿಂದ 5 ನೇ ಪ್ರತಿವಾದಿಯ ತಂದೆಯಾದ ವೆಂಕಟರಮಣ ವೆಂಕಟರಮಣ ಭಟ್ಟ ಇವರ ಆಸ್ತಿ ಆಗಿರುವುದರಿಂದ 9ನೇ ಪ್ರತಿವಾದಿಯು ಸದ್ರಿ ಆಸ್ತಿಯನ್ನು 6ನೇ ಪ್ರತಿವಾದಿಯಿಂದ ಖರೀದಿ ಮಾಡಿರುವುದರಿಂದ 9ನೇ ಪ್ರತಿವಾದಿಯು ಸದ್ಭಾವನಾ ಖರೀದಿದಾರಳಾಗಿರುತ್ತಾಳೆ ಎಂದರೆ ಸರಿಯಲ್ಲ.

ಈ ಎಲ್ಲಾ ದಾವಾ ಆಸ್ತಿಗಳು ಪ್ರತಿವಾದಿ ನಂಬರ 1 ರಿಂದ 6 ರವರ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿ.ಡಬ್ಲ್ಯು.1

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿ ಇದೆ

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ